# ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಬಸನಗೌಡ ಬಾದರ್ಲಿ (ವಿಧಾನ ಸಭೆಯಿಂದ ಚುನಾಯಿತರಾದವರು) ರವರು ನಿಯಮ 330 ರಡಿ ಪ್ರಸ್ತಾಪಿಸಿರುವ ಸೂಚನೆಯಲ್ಲಿ "ರಾಯಚೂರು ಜಿಲ್ಲೆಯ ಸಿಂಧನೂರ ತಾಲ್ಲೂಕಿನಲ್ಲಿ ಇತ್ತೀಚಿಗೆ ಅಂದಾಜು ರೂ.10 ಕೋಟಿಗಳ ಅನುದಾನದಲ್ಲಿ ನಿರ್ಮಾಣಗೊಂಡು ಉದ್ಘಾಟನೆಗೊಂಡಿದ್ದ ತಾಯಿ ಮತ್ತು ಮಕ್ಕಳ ಆಸ್ಪತ್ರೆಯ ಮೇಲ್ಛಾವಣಿಯಿಂದ ಮಳೆ ನೀರು ಸೋರುತ್ತಿದ್ದು, ಈ ಕುರಿತು ದಿನ ಪತ್ರಿಕೆಗಳಲ್ಲಿ ವರದಿಯಾಗಿರುವ ಕುರಿತು ಹಾಗೂ ಸದರಿ ಕಟ್ಟಡದ ಕಳಪೆ ಕಾಮಗಾರಿಗೆ ಕಾರಣರಾದವರ ಮೇಲೆ ಕಾನೂನು ರೀತಿ ಕ್ರಮಕೈಗೊಳ್ಳುವ ಕುರಿತು:-

**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಹೇಳಿಕೆ: -**

ರಾಯಚೂರು ಜಿಲ್ಲೆಯ ಸಿಂಧನೂರಿನಲ್ಲಿ 60 ಹಾಸಿಗೆ ಸಾಮರ್ಥ್ಯದ ತಾಯಿ ಮತ್ತು ಮಕ್ಕಳ ಆಸ್ಪತ್ರೆ ಕಾಮಗಾರಿಯ ನಿರ್ಮಾಣ ಕಾಮಗಾರಿಗೆ ಆದೇಶ ಸಂಖ್ಯೆ: ಆಕುಕ 270 ಸಿಜಿಎಂ 2020, ದಿನಾಂಕ:01.03.2021 ರಲ್ಲಿ ಅಂದಾಜು ಮೊತ್ತ ರೂ.1200.00 ಲಕ್ಷಗಳಿಗೆ ರಾಷ್ಟ್ರೀಯ ಆರೋಗ್ಯ ಅಭಿಯಾನದ ROP ಅಡಿಯಲ್ಲಿ ಅನುಮೋದನೆ ನೀಡಲಾಗಿದೆ.

ಸದರಿ ಕಾಮಗಾರಿಗೆ ನಿಯಮಾನುಸಾರ ಟೆಂಡರ್ ಆಹ್ವಾನಿಸಿ ಗುತ್ತಿಗೆ ಆಧಾರದಲ್ಲಿ ಶ್ರೀ ಗೋಲಯ್ಯ ಹಿರೇಮಠ್ ಕಲಬುರಗಿ ರವರಿಗೆ ದಿನಾಂಕ:26.07.2021ರಲ್ಲಿ ಕಾರ್ಯಾದೇಶ ನೀಡಿ ಗುತ್ತಿಗೆ ವಹಿಸಲಾಗಿರುತ್ತದೆ. ಅದರಂತೆ, ಗುತ್ತಿಗೆದಾರರು ಕಾಮಗಾರಿಯನ್ನು ಪೂರ್ಣಗೊಳಿಸಿ, ದಿನಾಂಕ:15.08.2025 ರಂದು ಇಲಾಖೆಗೆ ಹಸ್ತಾಂತರ ಮಾಡಿರುತ್ತಾರೆ.

ರಾಯಚೂರು ಜಿಲ್ಲೆಯ ಸಿಂಧನೂರಿನಲ್ಲಿ 60 ಹಾಸಿಗೆ ಸಾಮರ್ಥ್ಯದ ತಾಯಿ ಮತ್ತು ಮಕ್ಕಳ ಆಸ್ಪತ್ರೆಯು ದಿನಾಂಕ:27.09.2025 ರಂದು ಉದ್ಘಾಟನೆಗೊಂಡು ಸಾರ್ವಜನಿಕರ ಸದುಪಯೋಗಕ್ಕಾಗಿ ಲೋಕಾರ್ಪಣೆಗೊಳಿಸಲಾಗಿರುತ್ತದೆ. ಕಟ್ಟಡದ ಮೊದಲನೇ ಮಹಡಿಯ ಮೇಲ್ಛಾವಣಿಯ ಮೇಲೆ ಸ್ಟೇರ್‌ಕೇಸ್ ಹೆಡ್ರೂಮ್ ಮತ್ತು ರ್‍ಯಾಂಪ್ ಮಧ್ಯಭಾಗದ ಪ್ಯಾಸೇಜ್‌ನಲ್ಲಿ ಪಾರ್ಕಿಂಗ್ ಟೈಲ್ಸ್ (Checked Mosaic Tiles) ಗಳನ್ನು ಅಳವಡಿಸಲಾಗಿದೆ, ಹೆಡ್ರೂಮ್‌ಗೆ ಪಕ್ಕದಲ್ಲಿ ಗೋಡೆಗಳು ಇಲ್ಲದ ಕಾರಣ ಹಾಗೂ ಸತತವಾಗಿ ಸುರಿದ ಮಳೆಯಿಂದಾಗಿ ಪಾರ್ಕಿಂಗ್ ಟೈಲ್ಸ್ (Checkered Mosaic Tiles) ಮೇಲ್ಭಾಗದಲ್ಲಿ ನೀರು ಶೇಖರಣೆಗೊಂಡು Grouted Joints ಹಾಗೂ ವಿದ್ಯುತ್ ಸಂಪರ್ಕಕ್ಕಾಗಿ ಅಳವಡಿಸಲಾಗಿರುವ ಕಾಂಡಿಟ್ (Conduit) ಪೈಪ್‌ನಿಂದ ಆಸ್ಪತ್ರೆಯ ಮೊದಲನೇ ಮಹಡಿಯ ರ್‍ಯಾಂಪ್ ಎದುರು ಭಾಗದಲ್ಲಿ ಮಳೆ ನೀರು ಸೋರಿಕೆಯಾಗಿರುತ್ತದೆ. ಪಾರ್ಕಿಂಗ್ ಟೈಲ್ಸ್ (Checkered Mosaic Tiles)ಗಳಿಂದ ಉಂಟಾಗಿರುವ ಸೋರಿಕೆಯನ್ನು ಗುರುತಿಸಿ ಸರಿಪಡಿಸುವ ಸಲುವಾಗಿ ಗುತ್ತಿಗೆದಾರರ ವತಿಯಿಂದ ಪಾರ್ಕಿಂಗ್ ಟೈಲ್ಸ್ (Checkered Mosaic Tiles)ಗಳನ್ನು ತೆರವುಗೊಳಿಸಿ, ವಾಟರ್ ಪ್ರೂಫಿಂಗ್ ಸ್ಕ್ರೀಡ್ ಕಾಂಕ್ರೀಟ್ ಅಳವಡಿಸಿಕೊಂಡು ಮತ್ತು ಮಳೆ ನೀರು ಶೇಖರಣೆಯಾಗದಂತೆ ಹಾದುಹೋಗಲು ಕ್ರಮವಹಿಸಿ ಸೋರಿಕೆಯನ್ನು ಸರಿಪಡಿಸಲಾಗಿದೆ.

**(ದಿನೇಶ್ ಗುಂಡೂರಾವ್)**
**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು.**

**ಆಕುಕ 199 ಎಸ್‌ಎಂಎಂ 2025**